**ಓ ಎಸ್ ನಂಃ 416-20**
**ಪಿ ಡಬ್ಲ್ಯೂ ಃ 2**

**ದಿಃ 13-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ** ವಾದಿ ಪರ ಶ್ರೀ ಬಿ ಎಸ್ ಎಸ್ ವಕೀಲರಿಂದ

**9. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.**

**10.** ನಾನು ಎಸ್ ಪಿ ಎ ಯನ್ನು ಹಾಜರುಪಡಿಸಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ನಿಪಿ 26 ಎಂದು ಗುರುತಿಸಲಾಯಿತು. ನಾನು ಸರ್ವೇ ನಂ 71ರ ಕೈಬರಹದ 4 ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ ಅವುಗಳನ್ನು ಒಟ್ಟಾಗಿ ನಿಪಿ 27 ಎಂದು ಗುರುತಿಸಲಾಯಿತು. ನಾನು ಸರ್ವೆ ನಂ 72ರ ಕೈಬರಹದ 4 ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ ಅವುಗಳನ್ನು ಒಟ್ಟಾಗಿ ನಿಪಿ 28 ಎಂದು ಗುರುತಿಸಲಾಯಿತು. ನಾನು ಮ್ಯುಟೇಷನ್ ರಿಜಿಸ್ಟರ್ ನ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ನಿಪಿ 29 ಎಂದು ಗುರುತಿಸಲಾಯಿತು. ನಾನು 2 ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ ಅವುಗಳನ್ನು ನಿಪಿ 30 ಮತು 31 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**

ಓ ಎಸ್ ನಂಃ 416-20
ಪಿ ಡಬ್ಲ್ಯೂ ಃ 2

ದಿಃ 13-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿ ಟಿ ಐ ವಕೀಲರಿಂದ

11. ನಾನು ಮುಖ್ಯ ಪೇದೆಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ನನಗೆ ಸದರಿ ದಾವೆಯಲ್ಲಿರುವ ವಿಷಯದ ಬಗ್ಗೆ 25 ವರ್ಷಗಳಿಂದ ಗೊತ್ತಿರುತ್ತದೆ. ಸದರಿ ದಾವೆಯಲ್ಲಿ ಮಾಹಿತಿಯನ್ನು ವಕೀಲರಿಗೆ ವಾದಿಗಳು ನೀಡಬೇಕಾದರೆ ನಾನು ವಕೀಲರ ಹತ್ತಿರ ಹೋಗಿರುವುದಿಲ್ಲ. ವಾದಿಗಳು ಸದರಿ ದಾವೆಯಲ್ಲಿ ಹಾಜರುಪಡಿರುವ ದಾಖಲೆಗಳನ್ನು ನಾನು 2012 ನೇ ಇಸವಿಯಲ್ಲಿ ನೋಡಿರುತ್ತೇನೆ. ನಾನು ಪಿ ಡಬ್ಲ್ಯೂ 1 ರವರ ವಿಚಾರಣೆಯಾಗುವಾಗ ನ್ಯಾಯಾಲಯಕ್ಕೆ ಬರುತ್ತಿದ್ದೆ. ನನಗೆ ಪಿ ಡಬ್ಲ್ಯೂ 1 ರವರು ಏನು ಹೇಳಿಕೆ ಕೊಟ್ಟಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ.

12. ಸರ್ವೆ ನಂ. 71 ಐಟಂ ನಂ 6 ರಲ್ಲಿ 38 3/4 ಗುಂಟೆ ಇರುತ್ತದೆ ಎಂದು ಯಾವುದಾದರೂ ದಾಖಲಾತಿಗಳು ಇರುತ್ತದೆಯೇ ಎಂದರೆ ಸಾಕ್ಷಿಯು ವಾದಿಯು ತಪ್ಪು ಮಾಹಿತಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ 71 ನನ್ನ ತಾತನ ಸ್ವಯಾರ್ಜಿತ ಆಸ್ತಿ ನನ್ನ ತಾತ ಸದರಿ ಆಸ್ತಿಯನ್ನು ಯಾವ ರೀತಿ ಸಂಪಾದನೆ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ನಿಪಿ 24 ನ್ನು ನಾನು ನೋಡಿರುವುದಿಲ್ಲ ಮತ್ತು ಓದಿರುವುದಿಲ್ಲ. ವಾದಿಗಳು ಐಟಂ ನಂ 6 ರಲ್ಲಿ 2 ಎಕರೆ 14 ಗುಂಟೆ ಜಮೀನು ಆಸ್ತಿ ಭಾಗ ಆಗಬೇಕು ಎಂದು ಹೇಳಿದ್ದು ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸದರಿ ಐಟಂ ನಂ 6 ರಲ್ಲಿ 38 3/4 ಗುಂಟೆ ಜಮೀನು ಇರುತ್ತದೆ ಎಂದು ಹೇಳಿದ್ದು ನಾನು ಹೇಳಿದ್ದ ವಿಚಾರ ಸತ್ಯವಾಗಿರುತ್ತದೆ. ಸದರಿ ದಾಖಲಾತಿಗಳು ನನ್ನ ತಾತ ಮುನಿಯಪ್ಪರವರಿಗೆ ಸೇರಿದ್ದು ಎಂದು ಹೇಳುವುದಕ್ಕೆ ಪಹಣಿ ಇದ್ದು ಅದು ಎಷ್ಟು ವಿಸ್ತೀರ್ಣ ಇರುತ್ತದೆ ಎಂದರೆ ಸಾಕ್ಷಿಯು ನನ್ನ ತಾತನ ಹೆಸರಿನಲ್ಲಿ 38 3/4 ಗುಂಟೆ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ 27 ರ ಪಹಣಿಯಲ್ಲಿ ನನ್ನ ತಾತ ಮತ್ತು ಇನ್ನಿತರೆ ಮೂರು ಜನರಿಗೆ 38 3/4 ಗುಂಟೆ ಜಮೀನು ತಲಾ ಬಂದಿರುತ್ತದೆ. ನಿಪಿ 27 ರಲ್ಲಿ ನಮ್ಮ ತಾತನಿಗೆ 38 3/4 ಗುಂಟೆ ಜಮೀನು ಯಾವ ವರ್ಷ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ನಮ್ಮ ತಾತನಿಗೆ ಜಮೀನು ಹೇಗೆ ಬಂದಿರುತ್ತದೆಂದು ಪಹಣಿಯನ್ನು ಬಿಟ್ಟು ಬೇರೆ ಯಾವುದೇ ದಾಖಲೆಯನ್ನು ನೋಡಿಲ್ಲ.

13. ಪಿ ಡಬ್ಲ್ಯೂ 1 ರವರ ವಿಚಾರಣೆಯಲ್ಲಿ ಹೇಳಿರುವ ಅಂಶಗಳು ಸರಿಯಿರುತ್ತವೆ ನಾನು ಅದನ್ನು ನೋಡಿರುತ್ತೇನೆ ಮತ್ತು ಓದಿರುತ್ತೇನೆ. ವಾದ ಪತ್ರದಲ್ಲಿರುವ ಹೇಳಿರುವ ಜಮೀನಿನ ಚಕ್ಕುಬಂದಿ ಸರಿಯಿರುತ್ತದೆ. ಸರ್ವೆ ನಂ 71 ಮತ್ತು ಸರ್ವೆ ನಂ 72 ಅಕ್ಕಪಕ್ಕ ಇರುತ್ತದೆ ಸರ್ವೆ ನಂ 72 ರ ಪಶ್ಚಿಮಕ್ಕೆ

ಸರ್ವೆ ನಂ 71 ಇರುತ್ತದೆ. ಸರ್ವೆ ನಂ 72 ರ ಪೂರ್ವಕ್ಕೆ ಗೋವಿಂದಪ್ಪರವರ ಜಮೀನು ಇರುತ್ತದೆ. ಸರ್ವೆ ನಂ 71 ರ ಪೂರ್ವಕ್ಕೆ ನಮ್ಮದೇ ಆದ ಸರ್ವೆ ನಂ 72 ಇರುತ್ತದೆ. ಸರ್ವೆ ನಂ 71 ರ ಪಶ್ಚಿಮಕ್ಕೆ ಹನುಮಯ್ಯರವರ ಜಮೀನು ಇರುತ್ತದೆ. ಸಂಜೀವಯ್ಯರವರು ಸರ್ವೆ ನಂ 71 ಮತ್ತು 72 ರ ಆಜುಬಾಜು ಇರುತ್ತಾರೆ ಎಂದು ಕೊಟ್ಟಿದ್ದು ಸಂಜೀವಯ್ಯರವರು ಕೇವಲ 1 ಸರ್ವೆ ನಂಬರ್ ಗೆ ಮಾತ್ರ ಆಜುಬಾಜು ಇರುತ್ತಾರೆ ಮತ್ತು ಅದರ ಬಗ್ಗೆ ನಿಖರವಾಗಿ ಹೇಳಲು ಆಗುವುದಿಲ್ಲ. ರಾಮು ಎಂಬುವವರು ಸರ್ವೆ ನಂ 72 ರ ಪೂರ್ವದ ದಿಕ್ಕಿಗೆ ಇರುತ್ತಾರೆ.

14. ವಾದ ಪತ್ರದಲ್ಲಿ ಸರ್ವೆ ನಂ 72 ರಲ್ಲಿ 2 ಎಕರೆ 30 ಗುಂಟೆ ಎಂದು ತೋರಿಸಿದ್ದು ನನ್ನ ಪ್ರಮಾಣ ಪತ್ರದಲ್ಲಿ 1 ಎಕರೆ 14 1/4 ಗುಂಟೆ ಎಂದು ತೋರಿಸಿದ್ದು ಸದರಿ ಜಮೀನಿನ ವಿಸ್ತೀರ್ಣ ನಾನು ಮುಖ್ಯ ವಿಚಾರಣೆ ಪತ್ರದಲ್ಲಿ ತೋರಿಸಿದ ಹಾಗೆ ಇರುತ್ತದೆ. ಸರ್ವೆ ನಂ 72 ರ ಒಟ್ಟು 5 ಎಕರೆ 21 ಗುಂಟೆ ಇದ್ದು ಅದರಲ್ಲಿ 4 ಗುಂಟೆ ಖರಾಬು ಇರುತ್ತದೆ. ಸರ್ವೆ ನಂ 72 ರಲ್ಲಿ ನಮ್ಮ ತಾತನು ಸೇರಿ 4 ಭಾಗ ಆಗಿರುತ್ತದೆ. ನಾನು ಸದರಿ ಜಮೀನಿನ ದಾಖಲಾತಿಗಳನ್ನು ನೋಡಿರುವುದಿಲ್ಲ. ನಮ್ಮ ತಾತನ ಜೊತೆ ಸರ್ವೆ ನಂ 72 ರಲ್ಲಿ ಹನುಮಯ್ಯ, ಬೈಲಪ್ಪ ಮತ್ತು ವೀರಹನುಮಯ್ಯರವರಿಗೆ ಭಾಗ ಆಗಿರುತ್ತದೆ. ನನ್ನ ತಾತನಿಗೆ ಅಣ್ಣ ಅಥವಾ ತಮ್ಮ ನಾರಾಯಣಪ್ಪ ಎನ್ನುವವರು ಇದ್ದರಾ ಎಂದರೆ ಗೊತ್ತಿಲ್ಲ. ನಿಪಿ 24 ರಲ್ಲಿ ನಾರಾಯಣಪ್ಪ ಎನ್ನುವವರಿಗೆ ಸರ್ವೆ ನಂ 72 ರಲ್ಲಿ ಭಾಗ ನೀಡಲಾಗಿರುತ್ತದೆ ಎಂದು ತೋರಿಸಲಾಗಿರುತ್ತದೆ ಎಂದರೆ ಕೊಟ್ಟಿಲ್ಲ. ಸರ್ವೆ ನಂ 71 ಮತ್ತು 72 ರಲ್ಲಿ ಯಾರು ಯಾರು ಯಾವ ಯಾವ ಕಡೆ ಭಾಗ ಪಡೆದುಕೊಂಡಿರುತ್ತಾರೆ ನನಗೆ ಗೊತ್ತಿರುತ್ತದೆ. ಸದರಿ ಭಾಗ ಆಗಿರುವ ಬಗ್ಗೆ ನನ್ನ ಹತ್ತಿರ ಯಾವುದೇ ದಾಖಲಾತಿಗಳು ಇರುವುದಿಲ್ಲ ಆದರೆ ನನಗೆ ಭಾಗ ಆಗಿರುವ ಬಗ್ಗೆ ಗೊತ್ತಿರುತ್ತದೆ. ನನಗೆ ಸರ್ವೆ ನಂ 71 ಮತ್ತು 72 ರ ಬಗ್ಗೆ ಏನು ಗೊತ್ತಿಲ್ಲದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

15. ಐಟಂ ನಂ 1 ರಿಂದ 4 ಜಮೀನು ನನ್ನ ತಾತನ ತಂದೆಯವರಿಂದ ನನ್ನ ತಾತ ಮತ್ತು ನಮ್ಮ ಕುಟುಂಬಕ್ಕೆ ಬಂದಿರುತ್ತದೆ. ನನ್ನ ಮುತ್ತಾತನಿಂದ ನನ್ನ ತಾತನಿಗೆ ಸದರಿ ಐಟಂ ನಂ 1 ರಿಂದ 4 ಜಮೀನು ಫವತಿ ಖಾತೆಯಿಂದ ಬಂದಿರಬಹುದು. ಐಟಂ 1 ರ ಒಟ್ಟು ವಿಸ್ತೀರ್ಣ 32 ಗುಂಟೆ ಇರುತ್ತದೆ. ಐಟಂ ನಂ 1 ರ ಒಟ್ಟು ವಿಸ್ತೀರ್ಣ 4 ಎಕರೆ 5 ಗುಂಟೆ ಇರುತ್ತದೆ ಅದರಲ್ಲಿ 5 ಗುಂಟೆ ಖರಾಬು ಇರುತ್ತದೆ ಎಂದರೆ ಗೊತ್ತಿರುತ್ತದೆ. ಸದರಿ ಐಟಂ ನಂ 1 ರಲ್ಲಿ ನನ್ನ ತಾತನ ಇನ್ನುಳಿದ ತಮ್ಮಂದಿರಿಗೆ ವಿಭಾಗ ಮಾಡಿಕೊಡಲಾಗಿರುತ್ತದೆ. ನನ್ನ ತಾತನ ಸಹೋದರರಿಗೆ ವಿಭಾಗದಲ್ಲಿ ಎಷ್ಟು ಜಮೀನು ಹೋಗಿರುತ್ತದೆಂದು ನನಗೆ ಗೊತ್ತಿಲ್ಲ. ಇನ್ನುಳಿದ 3 ಸರ್ವೆ ನಂಬರ್ ಗಳಲ್ಲಿಯೂ (ಐಟಂ ನಂ 2 ರಿಂದ 4) ಕೂಡ ನನ್ನ ತಾತನ ಸಹೋದರರಿಗೆ ಎಷ್ಟು ಭಾಗ ಆಗಿರುತ್ತದೆ ಮತ್ತು ಹೇಗೆ ಬಂದಿರುತ್ತದೆ ನನಗೆ

ಗೊತ್ತಿಲ್ಲ.

16. ಐಟಂ 1 ರಿಂದ 4 ರಲ್ಲಿ ಬಸಪ್ಪಾಚಾರಿ ಮತ್ತು ವೀರಣ್ಣಾಚಾರಿಯವರಿಗೆ ಜಮೀನು ಇರುವುದು ನನಗೆ ಗೊತ್ತಿರುವುದಿಲ್ಲ. ನನ್ನ ತಾತನ ತಮ್ಮಂದಿರು ತಮ್ಮ ಜಮೀನುಗಳನ್ನು ಇಟ್ಟುಕೊಂಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ಗಳ ಬಗ್ಗೆ ಹನುಮಪ್ಪ ಮತ್ತು ಬೈಲಪ್ಪರವರಿಂದ ಖರೀದಿ ಮಾಡಿರುವುದಾಗಿ ಕೇಸ್‌ಗಳು ಶಿವಣ್ಣ ಮತ್ತು ಕಲಾವತಿಯವರು ನಡೆಸುತ್ತಿರುವುದು ನನಗೆ ಗೊತ್ತಿಲ್ಲ. ಮುನಿಯಪ್ಪರವರ ಮಕ್ಕಳು ಜಿ ಪಿ ಎ ಯನ್ನು ಮಾಡಿ ಶಿವಣ್ಣರವರಿಗೆ ಕೊಟ್ಟಿರುತ್ತಾರೆಂದು ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿರುವ ಬಗ್ಗೆ ದಾವೆ ಇರುವುದರ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಬಗ್ಗೆ 15-20 ದಾವೆಗಳು ಇತ್ಯರ್ಥವಾಗಿದ್ದು ಈಗಲೂ ಕೂಡ 11 ದಾವೆಗಳು ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುತ್ತವೆ ಎಂದರೆ ಗೊತ್ತಿಲ್ಲ. ನಾನು ಐಟಂ 1 ರಿಂದ 4 ನ್ನು ನೋಡಿರುತ್ತೇನೆ. ಸರ್ವೆ ನಂ 162 ರ ಪೂರ್ತಾ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಪೂರ್ವಕ್ಕೆ ಮುದ್ದಯ್ಯರವರ ಜಮೀನು, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ನಮ್ಮದೇ ಆದ ಜಮೀನು. ಸದರಿ ಸರ್ವೆ ನಂ 162 ರ ಪಶ್ಚಿಮದಲ್ಲಿರುವ ರಸ್ತೆ ದೊಡ್ಡಾಲದಮರಕ್ಕೆ ಹೋಗುವ ರಸ್ತೆಯಾಗಿರುತ್ತದೆ. ದಕ್ಷಿಣಕ್ಕೆ ನಮ್ಮದೇ ಆದ ಸರ್ವೆ ನಂ 163 ರ ಜಮೀನು ಆಗಿರುತ್ತದೆ. ಸರ್ವೆ ನಂ 162 ರ ಪಶ್ಚಿಮಕ್ಕೆ ಸರ್ವೆ ನಂ 161 ಇರುತ್ತದೆ. ನನ್ನ ವಾದ ಪತ್ರದಲ್ಲಿರುವ ಚಕ್ಕುಬಂದಿ ಮತ್ತು ವಿಸ್ತೀರ್ಣವನ್ನು ನೋಡಿರುತ್ತೇನೆ. ವಾದಪತ್ರದಲ್ಲಿ ಐಟಂ 2 ರ ಚಕ್ಕುಬಂದಿ ನೀಡಿರುವುದು ಸರಿಯಿರುತ್ತದೆ ನಾನು ಮೇಲೆ ಹೇಳಿರುವ ಚಕ್ಕುಬಂದಿ ತಪ್ಪಾಗಿರುತ್ತದೆ. ಸರ್ವೆ ನಂ 162 ರ ಪಶ್ಚಿಮಕ್ಕೆ ದೊಡ್ಡಾಲದಮರದ ರಸ್ತೆ ಇರುತ್ತದೆ ಎಂದರೆ ಸರಿ. ಸರ್ವೆ ನಂ 162 ರ ದಕ್ಷಿಣಕ್ಕೆ ಸರ್ವೆ ನಂ 161 ಇರುತ್ತದೆ ಎಂದರೆ ಇರಬಹುದು. ಐಟಂ ನಂ 1 ರಿಂದ 4 ರ ಸರ್ವೆ ನಂಬರ್ ಗಳಲ್ಲಿ 5 ಜನರಿಗೆ ಮಂಜೂರು ಆಗಿರುತ್ತದೆ ಎಂದರೆ ಗೊತ್ತಿಲ್ಲ.

17. ನಾನು ಇನಾಂ ಡಿ ಸಿ ಆದೇಶವನ್ನು ನೋಡಿರುತ್ತೇನೆ. ಐಟಂ 1 ರಿಂದ 4 ರಲ್ಲಿ ಇನಾಂ ಡಿ ಸಿ ಯವರ ಆದೇಶದ ಪ್ರಕಾರ ಎಷ್ಟು ಜನರಿಗೆ ಮಂಜೂರಾಗಿರುತ್ತದೆಂದು ನನಗೆ ಗೊತ್ತಿಲ್ಲ. ಪಿ ಡಬ್ಲ್ಯೂ 1 ರವರು ನಿಪಿ 24 ರ ಪ್ರಕಾರ ಐಟಂ ನಂ 1 ರಿಂದ 4 ರಲ್ಲಿ ಒಟ್ಟು ವಿಸ್ತೀರ್ಣ 6 ಎಕರೆ 39 ಗುಂಟೆಯಲ್ಲಿ ನನ್ನ ತಾತನೂ ಸೇರಿ 3 ಜನರಿಗೆ ವಿಭಾಗ ಆಗಿರುತ್ತದೆ ಎಂದು ದಾಖಲಾತಿ ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ನಾನು ಬೇರೆಯವರ ಆಸ್ತಿಗಳನ್ನು ಸೇರಿಸಿ ತಪ್ಪು ಮಾಹಿತಿ ಕೊಟ್ಟಿರುತ್ತೇನೆ ಎಂದರೆ ಗೊತ್ತಿಲ್ಲ.

18. ನನ್ನ ತಾಯಿಯವರು ಮದುವೆಯಾಗಿ ಸುಮಾರು 52-53 ವರ್ಷಗಳಾಗಿರಬಹುದು. ನನ್ನ ತಾಯಿಯವರು ಮದುವೆಯಾದಾಗಿನಿಂದ ಬೆಂಗಳೂರಿನ ವಿವಿಧ ಕಡೆ ವಾಸವಿರುತ್ತಾರೆ. ವಾದಿ 4 ರವರು ಚಾಮರಾಜಪೇಟೆಯಲ್ಲಿ ವಾಸವಾಗಿರುತ್ತಾರೆ. ನನ್ನ ಮಾವಂದಿರು ಅಂದರೆ ಪ್ರತಿವಾದಿ 3, ಗಂಗಹನುಮಯ್ಯ, 1 ನೇ ವಾದಿ ಗಂಡ ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡಿಕೊಂಡಿರುತ್ತಾರೆ ಮತ್ತು

ಅವರು ಕೂಡ ಬೆಂಗಳೂರಿನ ಪೋಲಿಸ್ ಕ್ವಾಟ್ರಸ್ ನಲ್ಲಿ ವಾಸವಾಗಿದ್ದರು. ನನ್ನ ತಾತ ಮುನಿಯಪ್ಪರವರು ತಾವರೆಕೆರೆಯಲ್ಲಿ ವಾಸವಾಗಿದ್ದರು. ಪ್ರತಿವಾದಿ 3 ರವರು ಕೂಡ ತಾವರೆಕೆರೆಯಲ್ಲಿ ವಾಸವಾಗಿರುತ್ತಾರೆ. ಪ್ರತಿವಾದಿ 3 ಮತ್ತು ನನ್ನ ತಾತ ಮುನಿಯಪ್ಪ ಜೊತೆಯಲ್ಲಿ ವಾಸವಾಗಿದ್ದರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಪ್ರತಿವಾದಿ 3 ರವರು ನನ್ನ ತಾತನ ಜೊತೆ ಇದ್ದ ಕಾರಣ ಅವರಿಗೆ ಆಸ್ತಿ ನೀಡಬೇಕೆಂದು ನನ್ನ ತಾತ ವಾಗ್ದಾನ ಮಾಡಿ ತೀರಿಕೊಂಡಿರುತ್ತಾರೆ ಎನ್ನುವ ವಿಷಯ ನನಗೆ ಗೊತ್ತಿರುತ್ತದೆ ಎಂದರೆ ಗೊತ್ತಿಲ್ಲ. ನಾನು ಪ್ರತಿವಾದಿ 3 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸದರಿ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಭಾಗ ಬರಬೇಕಾಗಿಲ್ಲ ಎಂದರೆ ಸಂಬಂದಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ.

ಮರು ವಿಚಾರಣೆಃ ಇಲ್ಲ

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**